ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸಿ.ಎನ್.ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಚುನಾವಣಾ ಕ್ಷೇತ್ರ) ರವರು ನಿಯಮ-72ರಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಸಚಿವರ ಉತ್ತರ.

**ವಿಷಯ:** ಸಾಂಸ್ಕೃತಿಕ ನಗರಿ ಹಾಗೂ ಪ್ರವಾಸಿ ತಾಣವಾದ ಮೈಸೂರು ನಗರದಲ್ಲಿ ಇತ್ತೀಚಿನ ದಿನಗಳಲ್ಲಿ ಮಾದಕ ದ್ರವ್ಯಗಳ (Drugs) ಹಾವಳಿ ಹೆಚ್ಚಾಗಿರುವುದು ಅತ್ಯಂತ ಆತಂಕಕಾರಿ ವಿಷಯವಾಗಿದೆ. ವಿದ್ಯಾರ್ಥಿಗಳು ಮತ್ತು ಯುವಜನತೆಯ ಭವಿಷ್ಯವನ್ನು ಬಲಿಪಡೆಯುತ್ತಿರುವ ಈ ಜಾಲವನ್ನು ಮಟ್ಟಹಾಕಲು ಸರ್ಕಾರ ತುರ್ತು ಕ್ರಮ ಕೈಗೊಳ್ಳಬೇಕೆಂದು ನಿಯಮ -72 ರ ಅಡಿಯಲ್ಲಿ ಮಾನ್ಯ ಗೃಹ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಉತ್ತರ:-**

ಮೈಸೂರು ನಗರದಲ್ಲಿ ಡ್ರಗ್ಸ್ ಹಾವಳಿಯನ್ನು ಮಟ್ಟ ಹಾಕಲು ಸರ್ಕಾರವು ಈ ಕೆಳಕಂಡಂತೆ ಕ್ರಮ ಕೈಗೊಳ್ಳಲಾಗುತ್ತಿದೆ:-

- ಪೊಲೀಸ್ ಆಯುಕ್ತರು, ಉಪ ಪೊಲೀಸ್ ಆಯುಕ್ತರುಗಳು ಹಾಗೂ ಸಹಾಯಕ ಪೊಲೀಸ್ ಆಯುಕ್ತರುಗಳ ನೇತೃತ್ವದಲ್ಲಿ ಪ್ರತ್ಯೇಕ ತಂಡಗಳನ್ನು ರಚಿಸಿ, ಪ್ರತಿ ದಿನ ಮಾದಕ ವಸ್ತುಗಳ ಮಾರಾಟ, ಸಂಗ್ರಹ, ಸಾಗಾಣಿಕೆಯಲ್ಲಿ ತೊಡಗಿರುವವರನ್ನು ಪತ್ತೆ ಮಾಡುವ ಸಂಬಂಧ ವಿಶೇಷ ಕಾರ್ಯಾಚರಣೆ ಕೈಗೊಳ್ಳುತ್ತಿದ್ದು, ಪೆಡ್ಲರ್ ಗಳನ್ನು ಪತ್ತೆ ಮಾಡಿ ಹಿಂದಿನ ವರ್ಷಗಳಲ್ಲಿ ದಾಖಲಾಗಿದ್ದ ಪ್ರಕರಣಗಳಿಗಿಂತ 2025 ಮತ್ತು 2026ನೇ ಸಾಲಿನಲ್ಲಿ ಹೆಚ್ಚಿನ ಪ್ರಕರಣಗಳನ್ನು ದಾಖಲಿಸಿ ಆರೋಪಿಗಳ ವಿರುದ್ಧ ಕ್ರಮ ವಹಿಸಲಾಗುತ್ತಿದೆ. ವಿವರ ಈ ಕೆಳಕಂಡಂತಿದೆ:-

**Seizer Cases**

| Year | Reported | Accused | GANJA in KGs | SYNTHETIC DRUGS (Grams) | Value of the Drugs (Rs) |
|---|---|---|---|---|---|
| 2023 | 56 | 106 | 166.24 | 356.039 | 65,33,404/- |
| 2024 | 42 | 84 | 379.46 | 143.85 | 1,07,54,025/- |
| 2025 | 74 | 97 | 137.11 | 240.85 | 52,97,125/- |
| 2026 | 22 | 39 | 30.258 | 260.569 | 40,70,100/- |
| ಒಟ್ಟು | 194 | 326 | 713.068 | 1001.308 | 2,66,54,654/- |

- ನ್ಯಾಯಾಲಯದಿಂದ ಸರ್ಚ್ ವಾರೆಂಟ್‌ಗಳನ್ನು ಪಡೆದು ಎನ್.ಡಿ.ಪಿ.ಎಸ್. ಕಾಯ್ದೆಯ ಪ್ರಕರಣದ ಆರೋಪಿಗಳ ಮನೆಗಳನ್ನು ತಪಾಸಣೆ ಕೈಗೊಳ್ಳಲಾಗುತ್ತಿದ್ದು, ಈ ಸಮಯದಲ್ಲಿ ಮಾದಕ ಪದಾರ್ಥಗಳು ಕಂಡು ಬಂದಲ್ಲಿ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ.

- ಪುನರಾವರ್ತಿತ ಎನ್.ಡಿ.ಪಿ.ಎಸ್. ಕಾಯ್ದೆಯ ಆರೋಪಿಗಳ ವಿರುದ್ಧ ಹಿಂದಿನ ವರ್ಷಗಳಿಗಿಂತ 2025ನೇ ಸಾಲಿನಲ್ಲಿ ಹೆಚ್ಚಿನ ಗಡಿಪಾರು ಆದೇಶಗಳನ್ನು ಹೊರಡಿಸಲಾಗಿದೆ, ವಿವರಗಳನ್ನು ಈ ಕೆಳಗೆ ನೀಡಿದೆ:-

| Year | Externment done on NDPS Accused |
|---|---|
| 2023 | 2 |

| | |
|---|---|
| 2024 | 1 |
| 2025 | 12 |
| 2026 | 1 |
| ಒಟ್ಟು | 16 |

- ಪುನರಾವರ್ತಿತ ಆರೋಪಿಗಳ ವಿರುದ್ಧ PIT-NDPS ಕಾಯ್ದೆ-1988 ರನ್ವಯ ಕ್ರಮ ಕೈಗೊಳ್ಳಲಾಗುತ್ತಿದೆ.
- ನಗರದಲ್ಲಿನ ಹಾಸ್ಟೆಲ್, ಲಾಡ್ಜ್, ಪಾರ್ಕ್ , ಪೇಯಿಂಗ್ ಗೆಸ್ಟ್ ಹಾಗೂ ಇತರೇ ಸ್ಥಳಗಳಲ್ಲಿ ವಿಶೇಷ ತಪಾಸಣೆ ಕಾರ್ಯಾಚರಣೆ ಕೈಗೊಂಡಿದ್ದು, ಮಾದಕ ವಸ್ತುಗಳ ವ್ಯಸನಿಗಳನ್ನು ಪತ್ತೆ ಮಾಡಿ ಹಿಂದಿನ ವರ್ಷಗಳಿಗಿಂತ 2025 ಮತ್ತು 2026ನೇ ಸಾಲಿನಲ್ಲಿ ಹೆಚ್ಚಿನ ಮಾದಕ ವಸ್ತು ಸೇವನೆ ಪ್ರಕರಣಗಳನ್ನು ದಾಖಲಿಸಲಾಗಿದೆ. ಈ ವಿಶೇಷ ತಪಾಸಣೆ ವೇಳೆ ಕೋಟ್ಪಾ ಕಾಯ್ದೆ ಅಡಿಯಲ್ಲಿ ಸಣ್ಣ ಪ್ರಕರಣಗಳನ್ನು ಸಹ ದಾಖಲಿಸಲಾಗುತ್ತಿದೆ.

| ವರ್ಷ | ವಿಶೇಷ ಕಾರ್ಯಾಚರಣೆಗಳು | | | |
|---|---|---|---|---|
| | ಲಾಡ್ಜ್ | ಪಾರ್ಕ್ | ಪಿ.ಜಿ. | ಮೆಡಿಕಲ್ ಶಾಪ್ |
| 2025 | 5525 | 4126 | 2244 | 180 |
| 2026 | 2776 | 1994 | 1004 | - |
| ಒಟ್ಟು | 8301 | 6120 | 3248 | 180 |

| Year | Consumption Cases Reported | Consumption Cases Accused | Cotpa cases | Petty cases |
|---|---|---|---|---|
| 2023 | 6 | 6 | 1802 | 4339 |
| 2024 | 1 | 3 | 4288 | 7116 |
| 2025 | 414 | 434 | 8908 | 12480 |
| 2026 | 104 | 107 | 2436 | 4046 |
| ಒಟ್ಟು | 525 | 550 | 17434 | 27981 |

- ಮಾದಕ ದ್ರವ್ಯ ಮುಕ್ತ ನಗರ ನಿರ್ಮಾಣ ಮಾಡುವ ನಿಟ್ಟಿನಲ್ಲಿ " ಸುಮಿತ್ರ " ಉಪಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತಂದು "Person with substance use issue" ವ್ಯಕ್ತಿಗೆ ಒಬ್ಬರು ಪೊಲೀಸ್ ಸಿಬ್ಬಂದಿಯಂತೆ ನೇಮಕ ಮಾಡಿ, ವ್ಯಸನಿಯನ್ನು ವ್ಯಸನ ಮುಕ್ತನನ್ನಾಗಿ ಮಾಡುವ ಕಡೆ ಸಕ್ರಿಯವಾಗಿ ಕ್ರಮ ಕೈಗೊಳ್ಳಲಾಗುತ್ತಿದೆ. ಅಲ್ಲದೆ ಅವಶ್ಯಕ ವೈದ್ಯಕೀಯ ಚಿಕಿತ್ಸೆಯ ಬಗ್ಗೆ ನೆರವು ನೀಡುವುದರ ಜೊತೆಗೆ ಅವರ ಆತ್ಮವಿಶ್ವಾಸವನ್ನು ಮರಳಿ ಪಡೆಯುವ ಮತ್ತು ಉತ್ತಮ ನಾಗರೀಕರಾಗಿ ಸಮಾಜದಲ್ಲಿ ಜೀವನ ನಡೆಸಲು ಅನುಕೂಲವಾಗುವಂತೆ ಕ್ರಮ ಕೈಗೊಳ್ಳಲಾಗುತ್ತಿದೆ.
- ಮೈಸೂರು ನಗರ ಪೊಲೀಸ್ ವತಿಯಿಂದ " ವಿಮುಕ್ತಿ" ಎಂಬ ಘೋಷ ವಾಕ್ಯದೊಂದಿಗೆ ಮಾದಕ ಮುಕ್ತ ಮೈಸೂರಿನತ್ತ ಒಂದು ಹೆಜ್ಜೆ ಎಂಬ ನೂತನ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಈ ಕಾರ್ಯಕ್ರಮದ ಅಂಗವಾಗಿ ಪೊಲೀಸ್ ಇಲಾಖೆಯಿಂದ ವಾಟ್ಸಅಪ್ ಮೊಬೈಲ್ ಸಹಾಯವಾಣಿ ಸಂಖ್ಯೆ: 8277948080 ನ್ನು ಬಿಡುಗಡೆಗೊಳಿಸಿ, ಈ ಸಹಾಯವಾಣಿ ಸಂಖ್ಯೆ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಗುತ್ತಿದೆ. ಮಾದಕ ವಸ್ತುಗಳ ಮಾರಾಟ, ಸಾಗಾಟ ಹಾಗೂ ಸೇವನೆಯಂತಹ ಸಂಗತಿಗಳು ಕಂಡು ಬಂದಲ್ಲಿ ಸದರಿ ವಾಟ್ಸಅಪ್ ಸಹಾಯವಾಣಿ ಸಂಖ್ಯೆ ಮೂಲಕ ಮಾಹಿತಿಯನ್ನು ನೀಡುವಂತೆ ಕೋರಲಾಗಿದೆ.

- ಮೈಸೂರು ನಗರ ಪೊಲೀಸ್ ಠಾಣಾ ವತಿಯಲ್ಲಿರುವ ಶಾಲಾ-ಕಾಲೇಜು, ಆಡಳಿತ ಮಂಡಳಿ ಮತ್ತು ಸಾರ್ವಜನಿಕರ ಸಹಯೋಗದೊಂದಿಗೆ ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ಅರಿವು ಕಾರ್ಯಕ್ರಮ ಕೈಗೊಳ್ಳಲಾಗಿರುತ್ತದೆ. ಶಾಲಾ-ಕಾಲೇಜು ಕಟ್ಟಡದ ಸುತ್ತಮುತ್ತಲಿನ ಪ್ರದೇಶ ಹಾಗೂ ಪಾರ್ಕ್ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಸಹಾಯವಾಣಿ ಸಂಖ್ಯೆ ಹೊಂದಿರುವ ಭಿತ್ತಿಪತ್ರಗಳನ್ನು ಅಂಟಿಸಲಾಗಿರುತ್ತದೆ.

| ವರ್ಷ | ಒಟ್ಟು ಜಾಗೃತಿ ಕಾರ್ಯಕ್ರಮಗಳ ಸಂಖ್ಯೆ | ಸಾರ್ವಜನಿಕರು ಭಾಗವಹಿಸಿದ ಸಂಖ್ಯೆ | ವಿದ್ಯಾರ್ಥಿಗಳು ಭಾಗವಹಿಸಿದ ಸಂಖ್ಯೆ |
|---|---|---|---|
| 2025 | 533 | 15319 | 25572 |

- ಪ್ರತಿ ದಿನ ಸಂಜೆಯಿಂದ ಮಧ್ಯರಾತ್ರಿವರೆಗೂ ಪೊಲೀಸ್ ಠಾಣಾ ವ್ಯಾಪ್ತಿಗಳಲ್ಲಿ Area Domination ಮಾಡುತ್ತಿದ್ದು, ಈ ಸಮಯದಲ್ಲಿ ಪ್ರಮುಖವಾಗಿ ಗಾಂಜಾ ಮಾರಾಟದಲ್ಲಿ ತೊಡಗಿರುವ ಆರೋಪಿತರ ಮನೆಗಳನ್ನು ಶ್ವಾನದಳದೊಂದಿಗೆ ತಪಾಸಣೆ ಮಾಡುವ ಮೂಲಕ ಪರಿಶೀಲಿಸಲಾಗುತ್ತಿದೆ.

(ಡಾ: ಜಿ . ಪರಮೇಶ್ವರ)
ಗೃಹ ಸಚಿವರು

ಒಇ 19 ಪಿಎನ್‌ಡಿ 2026 (ಇ)